ಉಪಾಧ್ಯಕ್ಷರು. —ತಾವು ಹೇಳುವುದೆಲ್ಲಾ ರೆಕಾರ್ಡಿಗೆ ಹೋಗುವುದಿಲ್ಲ. ಆದ್ದರಿಂದ ತಾವು ಕುಳಿತು ಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು. — ಶ್ರೀ ನಾರಾಯಣಕುಮಾರ್ ಅವರೇ, ಯಾವುದಕ್ಕೂ ಒಂದು ಇತಿಮಿತಿ ಇರಬೇಕು. ಬೇರೆ ಕೆಲಸಗಳನ್ನು ಮಾಡಬೇಕೆಂದು ತಾವು ಹೇಳುತ್ತೀರೋ ಅಥವಾ ಇಲ್ಲವೋ ತಾವು ಬೇರೆಯವರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ನಾರಾಯಣಕುಮಾರ್.—ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟಿಲ್ಲ. ಅಲ್ಲಿ ಕಗ್ಗೊಲೆಯಾಗಿ ರಕ್ತಪಾತವಾಗಿದೆ. ಆದರೂ ಕೂಡ ಸರ್ಕಾರದ ಮುಖ್ಯ ಅಧಿಕಾರಿಗಳೇ ಆಗಲಿ ಅಥವಾ ಮಂತ್ರಿಗಳೇ ಆಗಲಿ ಯಾರೂ ಬಂದು ಪರಿಸ್ಥಿತಿಯನ್ನು ನೋಡಲಿಲ್ಲ.

(ಉಪಾಧ್ಯಕ್ಷರು ಅಪ್ಪಣೆ ಮೇರೆಗೆ ಪರದಿಯನ್ನು ಮಾಡಲಿಲ್ಲ)

ಶ್ರೀ ಜೆ. ನಾರಾಯಣಕುಮಾರ್.—ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು ಯಾವಾಗ ನನ್ನ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆಂಬುದು ನಿಖರವಾಗಿ ಹೇಳುವ ತನಕ ನಾನು ಇಲ್ಲಿ ಸತ್ಯಾಗ್ರಹವನ್ನು ಮಾಡುತ್ತೇನೆ.

(ಶ್ರೀ ಜೆ. ನಾರಾಯಣಕುಮಾರ್‌ರವರು ತಮ್ಮ ಸ್ಥಾನ ಬಿಟ್ಟು ಸತ್ಯಾಗ್ರಹವನ್ನು ಹೂಡಿದರು)

ಶ್ರೀ ಭೀಮಣ್ಣ ಎಸ್ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಹೇಳಿದರು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಇತ್ಯಾದಿ ಕಡೆಗಳಲ್ಲಿ ಸುಮಾರು ೫೦ ಲಕ್ಷ ಜನ ಕನ್ನಡಿಗರು ಇದ್ದಾರೆಂದು. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಸುಮಾರು ಅಂದರೆ ನಿಜಕ್ಕೂ ಇವರಿಂದ ಇಲ್ಲಿಯವರೆಗೂ ಆ ಜನರಿಗೆ ಅಲ್ಲಿ ರಕ್ಷಣೆ ಇಲ್ಲ, ಅಲ್ಲಿ ಇರತಕ್ಕಂಥ ಕನ್ನಡ ಶಾಲೆಗಳನ್ನು ಸಹ ಮುಚ್ಚಿದ್ದಾರೆ. ಮತ್ತೆ ಅಲ್ಲಿ ಕನ್ನಡ ಶಾಲೆಗಳು ತೆರೆಯಬೇಕೆಂದು ಆದೇಶವಿದ್ದರೂ ಸಹ ಇನ್ನೂ ತೆರೆಯಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ೫೦ ಲಕ್ಷ ಜನ ಕನ್ನಡಿಗರು ಹೊರಗಡೆ ಇದ್ದಾರೆಂದು ಈಗಾಲಾದರೂ ಗೊತ್ತಾಗಿದೆಯಲ್ಲ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂಥ ಶ್ರೀಮಾನ್ ನಾರಾಯಣಸ್ವಾಮಿಯವರಿಂದ ಕಳಕಳಿಯಾದರೂ ಏನೆಂದರೆ ಅವರ ಮತದಾರರ ಕ್ಷೇತ್ರದಲ್ಲಿ ನಿನ್ನೆಯ ದಿವಸ ಬಹಳ ಆಹಿತಕರವಾದಂಥ ಘಟನೆ ನಡೆದಿದೆ. ಅಲ್ಲಿ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ನೋಡುವುದಕ್ಕೆ ನನ್ನನ್ನು ಕರೆಯುತ್ತಿದ್ದಾರೆ. ಆದ್ದರಿಂದ ನಾನು ಅದಷ್ಟು ಬೇಗ ಅವರ ಮತದಾರರ ಕ್ಷೇತ್ರಕ್ಕೆ ಹೋಗಿ ಬರುತ್ತೇನೆ,

ಶ್ರೀ ಜೆ. ನಾರಾಯಣಕುಮಾರ್.—ಸ್ವಾಮಿ ಅದಷ್ಟು ಬೇಗ ಎಂದರೆ ಯಾವಾಗ ಎಂಬುದು ನಿಖರವಾಗಿ ತಿಳಿಸಿದರೆ ಒಳ್ಳೆಯದು,

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಸಾಧ್ಯವಾದರೆ ಇವತ್ತು, ನಾಳೆ ಸಾಧ್ಯವಾದರೆ ನಾಳೆ ಬರುತ್ತೇನೆ. ಬಹಳ ದೂರ ಹೋಗುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಹೊರಗಡೆ ಸುಮಾರು ೫೦ ಲಕ್ಷ ಜನ ಕನ್ನಡಿಗರು ಇದ್ದಾರೆಂದು...

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾತನಾಡುವುದು ನಮಗೆ ಅರ್ಥವಾಗುವುದಿಲ್ಲ. ಅದು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಾರೋ ..

(ಶ್ರೀ ಡಿ. ಬಿ. ಚಂದ್ರೇಗೌಡರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಮಾನ್ಯ ಅಧ್ಯಕ್ಷರೇ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಇತ್ಯಾದಿ ಕಡೆಗಳಲ್ಲಿ...

ಅಧ್ಯಕ್ಷರು.—ತಾವು ಇವತ್ತು ಸಭೆಯಲ್ಲಿ ನಡೆಯುತ್ತಿರುವ ವಿಷಯವನ್ನು ಬಿಟ್ಟು ಬೇರೆ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಸ್ವಾಮಿ ಇವತ್ತು ಹೊರಗಡೆ ಇರುವಂಥ ಕನ್ನಡಿಗರ ಶಾಲೆಗಳಂ ಆಗಿವೆ. ಅವುಗಳನ್ನು ತೆರೆಸಲಂ ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಏನು ಕ್ರಮವನ್ನು ಬಂದೆ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನನ್ನದೊಂದು ಕ್ರಿಯಾಲೋಪವಿದೆ. ಇವತ್ತಿನ ದಿವಸ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಇಲ್ಲಿ ನಡೆಯುತ್ತಿರುವ ವಿಷಯವನ್ನು ಬಿಟ್ಟು ಬೇರೆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಯಾವುದೇ ರೀತಿಯ ಸೂಚನೆಯನ್ನಾಗಲಿ ಅಥವಾ ನೋಟೀಸನ್ನಾಗಲಿ ಕೊಟ್ಟಿಲ್ಲ. ಆದ್ದರಿಂದ ಅವರು ಮಾತನಾಡುವುದನ್ನು ನಿಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ ನಾನು ನಿಯಮ ೩೩ರ ಪ್ರಕಾರ ಒಂದ್ ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು.—ಅನೇಕ ಜನ ಮಾನ್ಯ ಸದಸ್ಯರು ನಿಯಮ ೩೩ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ ನಾನು ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. ಈಗ ಮೊದಲನೆಯದಾಗಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಾಮದೇವ್‌ರವರು ಪ್ರಸ್ತಾಪ ಮಾಡಬಹುದು.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ ಇವತ್ತು ರಾಜ್ಯದಲ್ಲಿ ಒಳ್ಳೆಯ ಸುಗ್ಗಿಯ ಕಾಲ ಇದೆ ಆದರೂ ಕೂಡ ಇವತ್ತು ನಗರದಲ್ಲಿ ಆಹಾರ ಸಾಮಾಗ್ರಿಗಳ ಬೆಲೆಗಳು ಕಡಿಮೆಯಾಗಿಲ್ಲ. ಇದರ ಬಗ್ಗೆ ಸರ್ಕಾರದ ಪರು ಏನಾದರೂ ಗಮನಹರಿಸಿದ್ದಾರೆಯೇ ? ಈಗ ಸಾಮಾನ್ಯವಾಗಿ ಎಲ್ಲಾ ಕಡೆ ಬೆಳೆಗಳು ಕೈಗೆ ಬಂದಿವೆ. ಆದರೂ ಸಹ ಬೆಲೆಗಳು ಮಾತ್ರ ಕಡಿಮೆಯಾಗಿಲ್ಲ. ಇದರ ಬಗ್ಗೆ ನಗರದಲ್ಲಿ ವಾಸ ಮಾಡತಕ್ಕಂಥ ಜನಹಿಳೆಯರು ಈ ಬಗ್ಗೆ ತಮ್ಮ ಆತಂಕವನ್ನು ಪ್ರಕ್ತಪಡಿಸುತ್ತಿದ್ದಾರೆ.

ಶ್ರೀ ಬಿ. ಆರ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಮನೆಯಲ್ಲಿ ಜನಹಿಳೆಯರು ಇಲ್ಲದಿರುವಾಗ ಇವರಿಗೆ ಬೇರೆ ಜನಹಿಳೆಯರು ಯಾವಾಗ ಬಂದು ಹೇಳಿದರಂ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಆಹಾರ ಸಾಮಾಗ್ರಿಗಳಾದ ಗೋಧಿ, ಅಕ್ಕಿ ರಾಗಿ ಇತ್ಯಾದಿ ಬೆಲೆಗಳು ಜಾಸ್ತಿಯಾಗಿರುವುದರಿಂದ ಈ ಬೆಲೆಗಳನ್ನು ಕಡಿಮೆ ಮಾಡಲು ಸರ್ಕಾರದವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಇಲ್ಲವೇ ಎಂಬುದು ಗೊತ್ತಾಗಬೇಕು.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ನಿಯಮ ೩೩ರ ಪ್ರಕಾರ ನನ್ನ ಗಮನವನ್ನು ಸೆಳೆದಿದ್ದಾರೆ. ಆ ಬಗ್ಗೆ ಸರಿಯಾದ ಮಾಹಿತಿಯನ್ನು ಸಂಗ್ರಹಿಸಿ ಉತ್ತರ ಕೊಡಲು ನನಗೆ ಸ್ವಲ್ಪ ಕಾಲಾವಕಾಶ ಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಬಹಳ ಪಾಮುಖ್ಯವಾದಂಥ ಸಂಗತಿಯನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ನೆನ್ನೆಯ ದಿವಸ ಬೆಂಗಳೂರು ನಗರದ ಡೈರಿಯಂದರು ಸುಮಾರು ಒಂದೂವರೆ ಲಕ್ಷ ಲೀಟರ್ ಹಾಲನ್ನು ಚರಂಡಿಗೆ ಹಾಕಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಸುಮಾರು ೪ ಲಕ್ಷ ರೂಪಾಯಿಗಳು ನಷ್ಟವಾಗಿದೆ, ಹಿಂದೆ ಬೆಂಗಳೂರು ನಗರದಲ್ಲಿ ಇಂಥ ಬಂದ್‌ಗಳು ಆದಾಗ ರಾತ್ರಿ ೧೨–೦೦ ಗಂಟೆಯ ಸಮಯದಲ್ಲಿ ಲಾರಿಗಳಲ್ಲಿ ಹಾಲನ್ನು ತೆಗೆದುಕೊಂಡು ಹೋಗಿ ಆಯಾಯಾ ಏಜೆಂಟ್‌ಗಳಿಗೆ ಕೊಟ್ಟು ಬರುತ್ತಿದ್ದರು. ಆದರೆ ಈ ಸಾರಿ ಯಾವ ಕ್ರಮವನ್ನೂ ಅಲ್ಲಿನ ಅಧಿಕಾರಿಗಳು ತೆಗೆದುಕೊಳ್ಳಲಿಲ್ಲ. ಇದರಿಂದ ಬೆಂಗಳೂರು ನಗರದ ನಾಗರೀಕರಿಗೆ ಬಹಳ ತೊಂದರೆಯಾಗಿದೆ, ಮತ್ತು ಮಕ್ಕಳಿಗೆ ಕುಡಿಯಲು ಹಾಲು ಇಲ್ಲದೆ ಹಾಹಾಕಾರವೆದ್ದಿತ್ತು. ಇಲ್ಲಿ ನಷ್ಟವಾಗಿರುವ ಹಣಕ್ಕೆ ತಾವು ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ ಎಂಬುದು ಸರ್ಕಾರ ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಸ್ವಾಮಿ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಬಂದಿಲ್ಲ. ಅವರು ಬಂದಾಗ ಈ ಬಗ್ಗೆ ವಿವರವಾದಂಥ ಉತ್ತರವನ್ನು ಕೊಡುತ್ತಾರೆ. ಮುಖ್ಯವಾಗಿ ಒಂದು ಮಾತನ್ನು ಹೇಳುವುದಾದರೆ ಈ ಬಂದ್ ೧೮ನೇ ತಾರೀಖು ಬೆಳಿಗ್ಗೆ ೬ ೦೦ ಗಂಟೆಗೆ

ವ್ಯಾರಂಭವಾಯಿತು. ಡೈರಿಯಿಂದ ಲಾರಿಗಳನ್ನು ಹೊರಗಡೆ ಬಿಡುವುದಿಲ್ಲವೆಂದು ತಿಳಿದು ಅವರು ಲಾರಿಗಳನ್ನು ಹೊರಗಡೆ ಕಳುಹಿಸಿಕೊಡಲಿಲ್ಲ, ಕಾರಣ ಲಾರಿಗಳು ಕೆಟ್ಟು ಹೋದರೆ ಬೇಗ ರೀಪೇರಿ ಆಗದೆ ಹಾಲು ಸರಬರಾಜು ಮಾಡಲು ಕಷ್ಟವಾಗಬಹುದೆಂದು ಆ ರೀತಿ ಮಾಡಿರಬಹುದು. ನಾಳೆ ದಿವಸ ಮಾನ್ಯ ಮಂತ್ರಿಗಳು ಬಂದಾಗ ವಿವರವಾದ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಎರಡು ನೋಟೀಸ್ ಕಳುಹಿಸಿದ್ದಾರೆ. ಒಂದು ಬೆಂಗಳೂರು ನಗರದಲ್ಲಿ ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಬಗ್ಗೆ ಮತ್ತೊಂದು ಭದ್ರಾವತಿಯಲ್ಲಿ ನಡೆದಂತಹ ಅತ್ಯಾಚಾರದ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ನಾನು ಎರಡು ವಿಚಾರಗಳ ಬಗ್ಗೆ ನೋಟೀಸ್ ಕಳುಹಿಸಿದ್ದೇನೆ. ಒಂದು ಭದ್ರಾವತಿಯಲ್ಲಿ ನಡೆದಂತಹ ಅತ್ಯಾಚಾರ ಮತ್ತೊಂದು ಬೆಂಗಳೂರು ನಗರದ ಬಾಡಿವಾಳ ಚೆಕ್‌ಪೋಸ್ಟ್ ಹತ್ತಿರ ನಡೆದಂತಹ ಅತ್ಯಾಚಾರ. ಈ ವಿಚಾರ ಪತ್ರಿಕೆಗಳಲ್ಲೂ ಬಹಳ ವಿವರವಾಗಿ ಬಂದಿದೆ. ಹೆಣ್ಣುಮಗಳು ಬಟ್ಟೆಗಳನ್ನು ಮಾರಿ ಬಸ್ಸಿಗಾಗಿ ಕಾಯುತಕ್ಕ ಸಂದರ್ಭದಲ್ಲಿ ನಾಲ್ಕು ಜನಗಳು ಸೇರಿ ಬಲತ್ಕಾರವಾಗಿ ಮತ್ತೊಂದು ಕಡೆ ಆಕೆಯನ್ನು ಕರೆದುಕೊಂಡು ಹೋಗಿ ಅತ್ಯಾಚಾರ ನಡೆಸಿದ್ದಾರೆ. ಅತ್ಯಾಚಾರ ನಡೆಸಿದಂತಹ ನಾಲ್ಕು ಜನರೂ ಕೂಡ ಆ ಹೆಣ್ಣುಮಗಳು ವಾಸ ಮಾಡುವಂತಹ ಪ್ರದೇಶದಲ್ಲಿಯೇ ವಾಸವಾಗಿದ್ದಾರೆಂದು ಒಬ್ಬ ವ್ಯಕ್ತಿಯ ಹೆಸರನ್ನು ಸಹ ಆ ಹೆಣ್ಣುಮಗಳು ಹೇಳಿದ್ದಾಳೆ. ಒಬ್ಬ ವ್ಯಕ್ತಿಯನ್ನು ಅರೆಸ್ಟ್ ಮಾಡಿದ್ದಾರೆ. ಉಳಿದ ಮೂರು ಜನರು ತಲೆತಪ್ಪಿಸಿಕೊಂಡಿದ್ದಾರೆ. ಆ ವ್ಯಕ್ತಿಗಳು ಯಾರೆಂದು ಪೋಲೀಸ್‌ನವರಿಗೆ ಗೊತ್ತಿದ್ದರು ಅವರನ್ನು ಇದುವರೆಗೆ ಬಂಧಿಸಿಲ್ಲ. ಅತ್ಯಾಚಾರ ಮಾಡಿದಂತಹ ಮೂವರು ಕೂಡ ಓಡಾಡಿಕೊಂಡಿದ್ದಾರೆಂದು ತಿಳಿದುಬಂದಿದೆ. ಆ ಹೆಣ್ಣುಮಗಳು ಎಲ್ಲಾ ವಿವರಗಳನ್ನು ಕೊಟ್ಟರೂ ಈ ವಿಚಾರದಲ್ಲಿ ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಹೇಳಿಕೆ ಕೊಡಲಿಕ್ಕೆ ಮುಖ್ಯಮಂತ್ರಿಗಳು ಸಭೆಯಲ್ಲಿಲ್ಲ.

ಅದೇ ರೀತಿ ಭದ್ರಾವತಿಯಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಒಬ್ಬ ಹೆಣ್ಣುಮಗಳನ್ನು ಬಸ್ಸು ಹತ್ತಿಸುತ್ತೇವೆಂದು ಹೇಳಿ ಪಕ್ಕದ ಕಬ್ಬಿನಗದ್ದೆಗೆ ಹೊತ್ತಿಕೊಂಡು ಹೋಗಿ, ಕಬ್ಬಿನ ಗದ್ದೆಯಲ್ಲಿ ಅತ್ಯಾಚಾರ ಮಾಡಿದ್ದಾರೆ. ಕೊನೆಗೆ ಸಿನಿಮಾಕ್ಕೆ ಕರೆದುಕೊಂಡು ಹೋಗಿ ಅಲ್ಲೂ ಕೂಡ ಅತ್ಯಾಚಾರ ಮಾಡಿದ್ದಾರೆ. ಈ ವಿಚಾರ ಕೊನೆಯಲ್ಲಿ ಪೋಲೀಸ್‌ನವರಿಗೆ ಗೊತ್ತಾಗಿ ಕೆಲವರನ್ನು ಬಂಧನ ಮಾಡಿದ್ದಾರೆ. ಇನ್ನು ಕೆಲವರು ತಲೆತಪ್ಪಿಸಿಕೊಂಡಿದ್ದಾರೆ. ಪೋಲೀಸ್‌ನವರಿಗೆ ದೂರು ಕೊಡಲಾಗಿದೆ. ಹುಡುಗಿಯನ್ನು ನಂಬಿಸಿ ಕರೆದುಕೊಂಡು ಹೋಗಿದ್ದಾರೆಂದೂ ಎಲ್ಲಾ ವಿವರಗಳನ್ನು ದೂರವಾಣಿಯ ಮುಖಾಂತರ ತಿಳಿಸಿದರು. ಮೊದಲು ಅತ್ಯಾಚಾರ ಮಾಡಿದ್ದಲ್ಲದೆ, ಮತ್ತೊಂದು ಕಡೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ ತೀವ್ರ ಗಮನಹರಿಸಿಲ್ಲ. ಆದ್ದರಿಂದ ನನಗೆ ತಾವು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ಈಗ ತಾನೇ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅದಕ್ಕೆ ಸಂಬಂಧಪಟ್ಟ ಹಾಗೆ ನಾಳೆ ನಾವಿದ್ದರಲ್ಲಿ ಉತ್ತರ ಹೇಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ತಮ್ಮದು ಮತ್ತೊಂದು ವಿಷಯವಿದೆ. ಅದನ್ನು ಕೂಡ ಪ್ರಸ್ತಾಪಮಾಡಿ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಈ ವಿಚಾರ ಕೂಡ ಬಂದಿದೆ. ವಿಷಯ ಏನೆಂದರೆ ಒಬ್ಬ ಸಚಿವರ ಇಬ್ಬರು ಸುಪುತ್ರರು ಕಾಲೇಜು ವಿದ್ಯಾರ್ಥಿನಿಯನ್ನು ಕೀಟಲೆ ಮಾಡಿರುವುದು. ಇದೇ ತಿಂಗಳ ೧೪ನೇ ತಾರೀಖಿನ ಪತ್ರಿಕೆಯಲ್ಲಿ ಅದರ ಬಗ್ಗೆ ವರದಿ ಬಂದಿದೆ. ಕೋರಮಂಗಲ ಬಡಾವಣೆಯ ಮಹಿಳಾ ಕಾಲೇಜಿನಲ್ಲಿ ಬೆಳಿಗ್ಗೆ ಸಮಾರಂಭವಿದ್ದುದರಿಂದ ಅಲ್ಲಿಗೆ ಹೋಗಿದ್ದ ವಿದ್ಯಾರ್ಥಿನಿಯನ್ನು ಚುಡಾಯಿಸತಕ್ಕ ಕೆಲಸಕ್ಕೆ ಮಂತ್ರಿಗಳ ಇಬ್ಬರು ಮಕ್ಕಳು ಕೈಹಾಕಿದ್ದಾರೆ. ಅವರ ಹೆಸರು ಬಿ. ಜೆ. ಸಾಮಂತ್ ಮತ್ತು ಬಿ. ಜೆ. ಸಂಜಯ್ ಎಂದು. ವಿದ್ಯಾರ್ಥಿನಿಯು ಕೀಟಲೆ ಮಾಡುತ್ತಿದ್ದಾರೆಂದು ಪೋಲೀಸ್‌ನವರಿಗೆ ತಿಳಿಸಿದ್ದಾರೆ. ಈ ವಿಚಾರ ೧೫ನೇ ತಾರೀಖಿನ ಪ್ರಜಾವಾಣಿ ಪತ್ರಿಕೆಯಲ್ಲಿ ಮತ್ತು ಬೇರೆ ಪತ್ರಿಕೆಗಳಲ್ಲಿ ವಿವರವಾಗಿ ಬಂದಿದೆ. ಸಚಿವರ ಮಕ್ಕಳು ಎಂದು ಪತ್ರಿಕೆಯಲ್ಲಿ ಬಂದಿರುವುದರಿಂದ ಆ ಸಚಿವರ ಹೆಸರೇನು ? ಅವರು ಸಚಿವರ ಮಕ್ಕಳು ಎಂಬುದು ನಿಜವೆ ? ಕಾಲೇಜಿನ ಸಮಾರಂಭಕ್ಕೆ ಹೋಗಿದ್ದ ವಿದ್ಯಾರ್ಥಿನಿಯನ್ನು ಕೀಟಲೆ ಮಾಡಿದ್ದು ಸಚಿವರ ಮಕ್ಕಳು ಎಂದು ಗೊತ್ತಾದ

ಮೇಲೆ ಆ ವಿಷಯವನ್ನು ಬದಲಾವಣೆ ಮಾಡಿ ಅವರು ಕೇಟಲೆ ಮಾಡಿಲ್ಲ, ಆವರು ಶಿರಸ್ತ್ರಾಣವಿಲ್ಲದೆ ದ್ವಿಚಕ್ರ ವಾಹನದಲ್ಲಿ ಸಂಚಾರ ಮಾಡುತ್ತಿದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಪೋಲೀಸ್‌ನವರೇ ಕೇಟಲೆ ಮಾಡಿಲ್ಲವೆಂದು ಹೇಳಿದ್ದಾರೆ, ಕೇಟಲೆ ಮಾಡಿದ್ದಾರೆಂದು ವಿದ್ಯಾರ್ಥಿನಿ ಪೋಲೀಸ್‌ನವರಿಗೆ ತಿಳಿಸಿದ್ದಾರೆ. ಆಮೇಲೆ ಇದು ಶಿರಸ್ತ್ರಾಣಕ್ಕೆ ವರ್ಗಾವಣೆಯಾಗಿದೆ. ಪೋಲೀಸ್‌ನವರು ಕೂಡಲೇ ವಿದ್ಯಾರ್ಥಿನಿಯನ್ನು ಕೇಟಲೆ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದೆ, ಶಿರಸ್ತ್ರಾಣದ ಬಗ್ಗೆ ಸೃಷ್ಟಿಸಿಕೊಂಡಿದ್ದಾರೆ. ಜವಾಬ್ದಾರಿಯನ್ನು ಹೊತ್ತಿರತಕ್ಕ ಸಚಿವರ ಕೈವಾಡ ಇದರಲ್ಲಿ ಇದೆಯೆಂದಂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಚಿವರ ಮಕ್ಕಳಾದರೇನು, ಯಾರ ಮಕ್ಕಳಾದರೇನು ಅವರು ತಪ್ಪು ಮಾಡಿದ್ದರೆ ಅವರ ಮೇಲೆ ಕೇಸು ಹಾಕಲೇಬೇಕು. ಅವರು ಬೇಕಾದರೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿ ಬಿಡಿಸಿಕೊಂಡು ಬರುತ್ತಾರೆ. ಮೊದಲು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಪೋಲೀಸ್‌ನವರ ವಿರುದ್ಧ ದೂರು ಕೊಟ್ಟ ಮೇಲೆ, ಅವರು ಶಿರಸ್ತ್ರಾಣ ಧರಿಸದೆ ಇದ್ದುದರಿಂದ ನಾವು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಸಚಿವರ ಕೈವಾಡ ಇದ್ದೇ ಇದೆ. ಅಧಿಕಾರ ದುರುಪಯೋಗ ಮಾಡಿಕೊಂಡು ತಮ್ಮ ಮಕ್ಕಳನ್ನು ಬಚಾವ್ ಮಾಡಲಿಕ್ಕೆ ಪ್ರಯತ್ನಪಟ್ಟಿದ್ದಾರೆ. ಆದುದರಿಂದ ಆ ಸಚಿವರು ಯಾರು ? ಅವರ ಹೆಸರೇನು ? ಅದನ್ನು ದಯವಿಟ್ಟು ತಿಳಿಸಬೇಕು !

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂತಹದರ ಬಗ್ಗೆ ನಾಳೆ ಉತ್ತರ ಕೊಡುತ್ತೇವೆಂದು ಹೇಳಿದರೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಸಚಿವರು ಯಾರೆಂದು ನಾನು ಹೇಗೆ ಗುರುತಿಸಲಿ, ನಿಮಗೆ ಇರುವ ತೊಂದರೆಯೇ ನನಗೂ ಇದೆ. ಈಗ ಯಾರಾದರೂ ಉತ್ತರ ಹೇಳಲಿಕ್ಕೆ ಹೋದರೆ ಅವರ ಮಕ್ಕಳೆಂದು ತಿಳಿದುಕೊಳ್ಳಬೇಕಾಗುತ್ತದೆ, ಆಗ ತೊಂದರೆ ಬರುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕಾನೂನು ಮಂತ್ರಿಗಳು ಏನಾದರೂ ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಈ ವಿಷಯವನ್ನು ನಿಯಮ ೩೩೪ರ ಪ್ರಕಾರ ಎತ್ತಿದ್ದಾರೆ. ವಿಷಯ ಸರ್ಕಾರದ ಗಮನಕ್ಕೆ ಬಂದಿದೆ, ಸಭೆಯ ಮುಕ್ತಾಯಕ್ಕೆ ನಿಲ್ಲಿಸೋಣ. ನಿಯಮ ೩೩೪ರ ವ್ಯಾಪ್ತಿಯೊಳಗೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಎಸ್. ಬಂಗಾರಪ್ಪ.—ಹಳೆಯ ವಾದವನ್ನು ಪುನಃ ಮಂಡನೆ ಮಾಡುವುದು ಬೇಡ.

ಅಧ್ಯಕ್ಷರು.—ನಾನು ಕಾನೂನು ಮಂತ್ರಿಗಳನ್ನೆ ಏತಕ್ಕೆ ಕರೆದೆ ಅಂದರೆ, ಬೇರೆಯವರನ್ನು ಕರೆದರೆ ಅವರ ಮಕ್ಕಳೇ ಎಂದು ತಿಳಿದುಕೊಳ್ಳಬಹುದು. ಆದರೆ ತಮ್ಮನ್ನು ಕರೆದರೆ ಅದು... ...

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಮೊದಲನೆಯ ಮಗ ಇಲ್ಲ, ಎರಡನೆಯ ಮಗನಂತೂ ಇಲ್ಲವೇ ಇಲ್ಲ.

ಅಧ್ಯಕ್ಷರು.—ವಿಷಯ ಸರ್ಕಾರದ ಗಮನಕ್ಕೆ ಹೋಗಿದೆಯೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಹೇಳಿಕೆ ಕೊಡಲಿಕ್ಕೆ ಸಮಯ ಬೇಕಾಗುತ್ತದೆ, ಇವತ್ತೇ ಉತ್ತರ ಕೊಡಬೇಕೆಂದು ನಾನು ಹೇಳುತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಮಂತ್ರಿಗಳ ಮಕ್ಕಳಾಗಿರಲಿ, ಬೇರೆಯವರ ಮಕ್ಕಳಾಗಿರಲಿ ಅಥವಾ ಮಾನ್ಯ ಬಂಗಾರಪ್ಪನವರ ಮಕ್ಕಳಾಗಿರಲಿ ಯಾರ ಮಕ್ಕಳಾದರೂ ಕೂಡ ಅವರ ಮೇಲೆ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತದೆ. ಅದರ ಬಗ್ಗೆ ಈ ಸದನದಲ್ಲಿ ಭರವಸೆಯನ್ನು ಕೊಡುತ್ತೇನೆ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಎಫ್.ಐ.ಆರ್. ಕೇಸ್ ಕೊಟ್ಟು ಆಗಿದೆ. ಇದೇನು ಖೂನಿಯಿಲ್ಲ, ಅಥವಾ ದರೋಡೆ ಕೇಸ್ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ ಮಂತ್ರಿಮಂಡಲದ ಸದಸ್ಯರೊಬ್ಬರು ಈ ರೀತಿ ಹೇಳುವುದು ಸರಿಯಲ್ಲ. ಸಚಿವರು ಹೇಳತಕ್ಕ ಮಾತಂ ಇದೇನು ಖೂನಿಯಲ್ಲ, ದರೋಡೆಯಲ್ಲವೆಂದು ಹೇಳುವ ಕ್ರಮ ಏನಿದೆ, ಅದು ಸರಿಯಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ತಪ್ಪು ಮಾಡಿಲ್ಲ ಅಂತ ಹೇಳಿಲ್ಲ.

೩-೫೦ ಪಿ. ಏಂ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ ?

ಶ್ರೀ ಆರ್. ಎಲ್. ಜಾಲಪ್ಪ.—ಯಾರು ತಪ್ಪು ಮಾಡಿದರೂ ತಪ್ಪು ತಪ್ಪೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಇದೇನು ಮೊನಿಯಲ್ಲ, ದರೋಡೆಯಲ್ಲ ಅಂತ ಹೇಳಿದ್ದೀರಿ. ಇದರ ಅರ್ಥ ಏನು ?

ಶ್ರೀ ಆರ್. ಎಲ್. ಜಾಲಪ್ಪ.—ತಪ್ಪು ಯಾರೇ ಮಾಡಲಿ ಶಿಕ್ಷೆಯನ್ನು ಅನುಭವಿಸ ಬೇಕಾಗುತ್ತದೆ ಎಫ್.ಐ.ಆರ್. ಆಗಿದೆ. ಕಾನೂನು ಪ್ರಕಾರ ಏನು ಶಿಕ್ಷೆ ಅನುಭವಿಸಬೇಕೋ ಅದನ್ನು ಅವರು ಅನುಭವಿಸುತ್ತಾರೆ.

ಅಧ್ಯಕ್ಷರು.—ಅವರಿಗೆ ಒಂದು ಅವಕಾಶವನ್ನು ಕೊಟ್ಟು ನೋಡೋಣ ಬಂಗಾರಪ್ಪನವರೇ.

ಶ್ರೀ ಭೀಮಣ್ಣ ಖಂಡ್ರೆ.—ಮೊನಿ ಅಲ್ಲ, ದರೋಡೆ ಅಲ್ಲ ಎಂದು ಬಹಳ ಹಗುರವಾಗಿ ತೆಗೆದು ಕೊಂಡಿದ್ದಾರೆ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಜೆ. ಎಚ್. ಪಟೇಲ್‌ರು ಏನು ಹೇಳುತ್ತಾರೋ ನೋಡೋಣ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ನಡೆದಿರುವ ಘಟನೆ ಬಗ್ಗೆ ಪತ್ರಿಕೆಗಳಲ್ಲಿ ಎರಡು ತರಹದ ಸುದ್ದಿಗಳು ಬಂದಿವೆ. ಸರ್ಕಾರಕ್ಕೆ ಗೃಹಶಾಖೆಯಿಂದ ಏನು ವರದಿ ಬಂದಿದೆಯೋ ಗೊತ್ತಿಲ್ಲ. ಅಲ್ಲಿಂದ ಬಂದಿರತಕ್ಕ ವಿಷಯ ಯಾರ ಬಗ್ಗೆಯೇ ಆಗಿರಲಿ ಅದರ ಪೂರ್ತಿ ವಿಷಯವನ್ನು ಸರ್ಕಾರಕ್ಕೆ ಕೊಡುತ್ತೇವೆ. ಇದರ ಬಗ್ಗೆ ಇನ್ನು ಚರ್ಚೆ ಬೇಡ.

ಶ್ರೀ ಅಪ್ಪಾರಪ್ಪ ನಾಯಕ.—ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಗಂಗಾವತಿ ಸಿಂಧನೂರಿನಲ್ಲಿ ಈ ವರ್ಷ ಭತ್ತ ಬೆಳೆಗೆ ರೋಗ ಬಂದು ಬಹಳ ಫಸಲು ನಷ್ಟವಾಗಿದೆ. ಭತ್ತ ಬೆಳೆಗಾರರಿಗೆ ಸರ್ಕಾರದವರು ಪರಿಹಾರ ಒದಗಿಸಬೇಕೆಂದು ಸರ್ಕಾರದ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಟ್ಟಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆ. ಕೆಲವು ಭತ್ತದ ಇಳುವರಿ ಈ ವರ್ಷ ಕಡಿಮೆಯಾಗಿದೆ. ಇದರ ಬಗ್ಗೆ ಸರ್ಕಾರದ ವತಿಯಿಂದ ಹೇಳಿಕೆ ಕೊಡಲಾಗುವುದು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಮಷಿನರೀಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಮೂರು ವರ್ಷಗಳ ಕೆಳಗೆ ಸ್ಥಾಪನೆಯಾಗಿ ಅಲ್ಲಿ ಐಟಿಐ ಆಪ್ರೆಂಟಿಶಿಪ್ ಪಾಸು ಮಾಡಿದ ಅನುಭವಿ ಕೆಲಸಗಾರರನ್ನು ಅಲ್ಲಿ ನುರಿತ ಕೆಲಸಕ್ಕೆ ತೆಗೆದುಕೊಂಡು ಇವರನ್ನು ಟ್ರೈನೀ ಗಳೆಂದು ಪರಿಗಣಿಸಿ ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಇವರುಗಳು ಒಂದು ಸಂಘ ಮಾಡಿಕೊಂಡು ತಮ್ಮ ಹಕ್ಕುಗಳ ಬಗ್ಗೆ ಕೇಳಿದ್ದಕ್ಕೆ ಅವರನ್ನು ಗುಜರಾತಿಗೆ, ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಸೊಫಿಸ್ಟಿಕೇಟೆಡ್ ಮೆಶಿನರೀಸ್ ಇಲ್ಲಿ ತಯಾರು ಮಾಡು ತ್ತಿದ್ದಾರೆ. ಎಂಟುನೂರು ರೂಪಾಯಿ ಕೊಡುವ ಕಡೆ ಮುನ್ನೂರು ರೂಪಾಯಿ ಕೊಟ್ಟು ಟ್ರೈನಿಂಗ್ ಅಂತ ಕೊಡುತ್ತಿದ್ದಾರೆ. ಎರಡನೆಯದಾಗಿ ಅವರಿಗೆ ಟಾರ್ಗೆಟ್ ಫಿಕ್ಸ್ ಮಾಡಿ ಅವರ ಕೆಲಸ ತೃಪ್ತಿಕರ ವಾಗಿದೆಯೆಂದು ಸರ್ಟಿಫಿಕೇಟ್ ಕೊಟ್ಟು ಅವರು ಸಂಘ ಮಾಡಿಕೊಂಡ ತಕ್ಷಣ ಆತ್ಯಪ್ತಿಕರವಾಗಿದೆಯೆಂದು ಅವರ ಸೇವೆಯನ್ನು ಪರಿಗಣಿಸಲಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಒಂದೂವರೆ ತಿಂಗಳಿನಿಂದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ಸಮಸ್ಯೆ ಪಾಲಿಸಿ ಮಾ ಟರ್ ಆಗಿದೆ.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಸಚಿವರು).—ನಾನು ಇದರ ಬಗ್ಗೆ ವಿವರಗಳನ್ನು ತರಿಸಿ ಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮುಖ್ಯ ಮಂತ್ರಿಗಳು ಇದರ ಬಗ್ಗೆ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ ಮಾತನಾಡಬೇಕು. ಕನ್ಸಿಲಿಯೇಶನ್‌ಗೆ ಕರೆದರೆ ಮ್ಯಾನೇಜ್‌ಮೆಂಟ್‌ನವರು ಬರುತ್ತಿಲ್ಲ. ಇಂಡಸ್ಟ್ರಿಯಲ್ ಅನ್‌ರೆಸ್ಟ್ ಆಗಿದೆ.

ಅಧ್ಯಕ್ಷರು.—ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಸರ್ಕಾರದ ಗಮನಕ್ಕೆ ತಂದಿದ್ದರೆ ಸಾಲದು ಸ್ವಾಮಿ ನಾನು ಕೇಳಿದರೆ ಹೀಗೆ ಹೇಳುತ್ತೀರಿ, ಶ್ರೀ ಬಂಗಾರಪ್ಪನವರು ಏನಾದರೂ ಪ್ರಶ್ನೆ ಕೇಳಿದರೆ ಆದಕ್ಕೆ ಮಂತ್ರಿಗಳಿಗೆ ಉತ್ತರ ಕೊಡಬೇಕೆಂದು ಹೇಳುತ್ತೀರಿ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೂ ಮಂತ್ರಿಗಳು ಉತ್ತರ ತರಿಸಿಕೊಡುತ್ತಾರೆ. ಆಯ್ತಲ್ಲ ?

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮೈಸೂರಿನಿಂದ ಸೈಕಲ್ಲಿನಲ್ಲಿ ಅಲ್ಲಿನ ಕಾರ್ಮಿಕರು ಬಂದಿದ್ದಾರೆ. ಮುಖ್ಯಮಂತ್ರಿಗಳು ಅಲ್ಲಿನ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ ಮಾತನಾಡಬೇಕು.

ಅಧ್ಯಕ್ಷರು.—ಶ್ರೀ ಸ್ವಾಮಿರಾವ್.....ಅವರಿಲ್ಲ. ಶ್ರೀ ಚನ್ನಬಸವನಗೌಡ ನೀವು ಮಾತನಾಡಿ.

ಶ್ರೀ ಚನ್ನಬಸವನಗೌಡ.—ಅಧ್ಯಕ್ಷರೇ, ರಾಜ್ಯ ರೈತ ಕಾರ್ಮಿಕ ಸಂಘದವರು ಕಬ್ಬನ್ ಪಾರ್ಕಿನಲ್ಲಿ ೧೬ನೇ ತಾರೀಕಿನಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಕೆಲವು ಸಮಸ್ಯೆಗಳ ಬಗ್ಗೆ ಬೇಡಿಕೆಗಳನ್ನು ಸರ್ಕಾರದ ಮುಂದೆ ಅವರು ಇಟ್ಟಿದ್ದಾರೆ. ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗಬೇಕು, ಲೆವಿ ಪದ್ಧತಿಯನ್ನು ಕೈಬಿಡಬೇಕು ಮಂತ್ರಿ ಅವರ ಸಾಲಗಳನ್ನು ಮನ್ನಾ ಮಾಡಬೇಕು ಮುಂತಾದ ಬೇಡಿಕೆಗಳನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ಮೊನ್ನೆ ದಿವಸ ಅವರು ಶ್ರೀ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಇದಕ್ಕೆ ಪರಿಹಾರ ಹುಡುಕಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—ಇವತ್ತು ನಾಳೆ ಇದನ್ನು ಪರಿಹರಿಸುತ್ತೇವೆ.

ಅಧ್ಯಕ್ಷರು —ಇನ್ನು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ... ಅಧ್ಯಕ್ಷರೇ, ನಾನು ಹಕ್ಕು ಚ್ಯುತಿ ನಿರ್ಣಯವನ್ನು ಕಳಿಸಿ ಕೊಟ್ಟಿದ್ದೇನೆ.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ, ನಾಳೆ ಇದನ್ನು ತೆಗೆದುಕೊಳ್ಳೋಣವೆ ?

ಶ್ರೀ ಎಸ್. ಬಂಗಾರಪ್ಪ —ಆಗಬಹುದು.

ಗಮನ ಸೆಳೆಯುವ ಸೂಚನೆ

ಧಾರವಾಡ ಜಿಲ್ಲೆ ಮಾರ್ಕೆಟಿಂಗ್ ಸೊಸೈಟಿಯವರು ರೈತ ಬೆಳೆದ ಹತ್ತಿಗೆ ಬೆಲೆ ಕಡಿಮೆ ಮಾಡಿದ್ದರಿಂದ ರೈತರಿಗೆ ಉಂಟಾದ ತೊಂದರೆಯ ಬಗ್ಗೆ.

ಶ್ರೀ ಬಿ. ಜೆ. ಬಣಕಾರ್.—ಧಾರವಾಡ ಜಿಲ್ಲೆ ಮಾರ್ಕೆಟಿಂಗ್ ಸೂಸೈಟಿಯವರು ರೈತ ಬೆಳೆದ ಹತ್ತಿಗೆ ಬೆಲೆಯನ್ನು ಕಡಿಮೆ ಮಾಡಿರುವುದರಿಂದ ರೈತರು ಬಹಳ ಕಳವಳಕ್ಕೀಡಾಗಿದ್ದಾರೆ ಎಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—ಇದರ ಬಗ್ಗೆ ನನ್ನ ಹೇಳಿಕೆಯನ್ನು ಓದುತ್ತೇನೆ.

ರಾಜ್ಯದಲ್ಲಿ ಸುಮಾರು ೫.೧೬ ಲಕ್ಷ ಬೇಲ್‌ಗಳಷ್ಟು ಉದ್ದ ಮತ್ತು ಅತೀ ಉದ್ದ ಎಳೆಯ ಹತ್ತಿ, ಮತ್ತು ೨.೭೭ ಲಕ್ಷ ಬೇಲ್ ಮಧ್ಯಮ ಎಳೆಯ ಹತ್ತಿ ಮತ್ತು ೬.೫೦ ಬೇಲ್‌ನಷ್ಟು ಇತರ ಹತ್ತಿಯನ್ನು ಈ ಸಾಲಿನಲ್ಲಿ ಉತ್ಪಾದಿಸುವ ಅಂದಾಜಿದೆ. ಮಧ್ಯಮ ಎಳೆಯ ಹತ್ತಿ ಮತ್ತು ಇದಕ್ಕಿಂತ ಕಡಿಮೆ ಉದ್ದ ವಿರುವ ಹರಳೆಯು ಇನ್ನೂ ಮಾರಾಟಕ್ಕೆ ಪೇಟೆಗೆ ಬಂದಿಲ್ಲ. ಉದ್ದ ಮತ್ತು ಅತೀ ಉದ್ದ ಎಳೆಯ ಹತ್ತಿ ಮಾರಾಟದಲ್ಲಿ ಇತ್ತೀಚೆಗೆ ಉದ್ಭವಿಸಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆ.

ಭಾರತ ಹತ್ತಿ ನಿಗಮವು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟ ನಿಗಮ. ಈ ನಿಗಮವು ರಾಜ್ಯದ ಒಟ್ಟು ೧೮ ಕೇಂದ್ರಗಳಿಂದ ಹತ್ತಿಯನ್ನು ಖರೀದಿಸುತ್ತಿದೆ. ಇದುವರೆಗೆ ಖರೀದಿಸಿದ ಬೆಲೆಯು ಹತ್ತಿಯ ಬೇಡಿಕೆಯನ್ನು ಆವಲಂಬಿಸಿತ್ತು. ಬೇಡಿಕೆಯೂ ಇತ್ತು, ಆದುದರಿಂದ ಇಲ್ಲಿಯವರೆಗೂ ಹತ್ತಿ ನಿಗಮವು ಖರೀದಿಸಿದ ಬೆಲೆಯು ಕೇಂದ್ರ ಸರ್ಕಾರ ನಿಗದಿ ಪಡಿಸಿದ ಬೆಂಬಲ ಬೆಲೆಗಿಂತ ಹೆಚ್ಚಾಗಿತ್ತು.